Dec 1.P.2

Reg No B G 155 3-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 4

ಸ್ಥಾಪಕರು : ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ದರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ 2 ಪೈಸೆ

# ತಮಿಳುನಾಡು ಮುಖ್ಯಮಂತ್ರಿ ಅಣ್ಣಾದೊರೈ ನಿಧನ

## "ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ಸೆರೆವೇರಿಸಲಾಗುವುದು

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯೈ ರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ. ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೋ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯಪೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವದೆಂದು ಆಶಿಸಿ, ಕೃತಜ್ಞತಾಪೂರ್ವಮಂದಿಸುತ್ತೇವೆ

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

## ಇಲ್ಲೂ ಹಾವಳಿಯೆ

ಮಧುರೆ ಜಿಲ್ಲೆ ಗಡಿ ಭಾಗಗಳಲ್ಲಿ ಮಾರಕ್ಸಿಸ್ಟ್ ತೀವ್ರಗಾಮಿಗಳಿಂದ ತಂಜಾವೂರು ಮಾದರಿ ಕಿಸಾನ್ ಚಳವಳಿಕ್ಕೆ ಸಿದ್ಧಗೊಂಡಿ ಕೊಳ್ಳಲಾಗುತ್ತಿದೆಯೆಂದು ಪ್ರಕಟವಾಗಿದೆ.

★

## ರಾಂಜಿ ಕ್ರಿಕೆಟ್ ಪಂಥ – ಗಲಾಟೆ

●

ಬೆಂಗಳೂರು— ರಾಂಜಿ ಕ್ರಿಕೆಟ್ ಪಂಥದ ಮುಂಬರುವ ನಿನ್ನೆ ಪಶ್ಚಿಮ ಬಂಗಾಳ ಮತ್ತು ಮೈಸೂರಿನ ಸೆಮಿ ಫೈನಲ್ಲಿನಲ್ಲಿ ಟೀ ಕಾಲಾನಂತರ ಪ್ರೇಕ್ಷಕರು ಗುಂಪು ಕಲ್ಲೆಸೆದು, ಆಡುವ ಪ್ರಳಕ್ಕೆ ನುಗ್ಗಿ ಫಲವನ್ನು ಕೆಡಿಸಿ, ಪ್ಯಾವಿಲಿಯನ್ಗೆ ಬೆಂಕಿ ಇಟ್ಟು ದರಿಂದ ಆಟ ತ್ಯಜಿಸಲಾಯಿತು – ಕುಂದೇರನ್ನನ ಮೇಲಿನ 'ಕ್ಯಾಚ್" ನನ್ನು ಸ್ವಲ್ಪ ತಡವಾಗಿ ಅಂಪೈರ್ ಭಟ್ಟಾಚಾರ್ಯರು ಅನುಮೋದಿಸಿದರು – 10 ಸಾವಿರ ಮಂದಿಯ ಕುಪಿತ ಗುಂಪು 'ಬ ಟ್ಟಾ ಚಾರ್ಯ ಗೋ ಬ್ಯಾಕ್, ಕುಂದುರಾಂ ಆಡಲಿ' ಎಂದು ಕೂಗುತ್ತಾ ಭಾರಿ ಗಲಾಟೆ ನಾಡಿತು– ತಂಡತಂಡದಲ್ಲಿ ಬಂದ ಪೋಲೀಸರು ಗುಂಪು ಚದರಲು ತಿಳಿಸಿದರು – ಕಲ್ಲೆಸದಲ್ಲಿ ಪೋಲಿಸರೂ ಗಾಯಗೊಂಡರು – ಪ್ಯಾಲೇಸು ರಸ್ತೆಯಲ್ಲಿ ಬೀದಿದೀಪಗಳು ಒಡೆಯಲ್ಪಟ್ಟವು – ರೂ. 10 ಸಾವಿರ ನಷ್ಟವಾಗಿದೆಯೆಂದು ಕ್ರಿಕೆಟ್ ಸಂಘದ ಅಂದಾಜು.

## ಆಂಧ್ರಪ್ರದೇಶದಲ್ಲಿ

○

ಹೈದರಾಬಾದು— ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ – ಗುಂಟೂರು ಜಿಲ್ಲೆಯಲ್ಲಿ ವಿದ್ಯಾರ್ಥಿಗಳು ಒಂದು ರೈಲನ್ನು ಅಡ್ಡಕಟ್ಟಿದರು – ವಿಜಯವಾಡಾ ಭಾಗದಲ್ಲಿ ಪ್ರಯಾಣೀಕರ ರೈಲು ಓಡಾಟ ಉತ್ತಮಗೊಂಡಿದೆ – ರಾಜಮಹೇಂದ್ರಿ ಕೋಕೆನಾಡ ಎಕ್ಸ್ಪ್ರೆಸ್ ಓಡಾಟ ನಿಲ್ಲಿಸಲಾಗಿದೆ – ನುಡಸಾಡಿವಿನಲ್ಲಿ ಒಂದು ರೈಲು ಕಂಬಿ ಕಿತ್ತು ಕಂಬಿ ಕೆಳಗಿನ ಮರವನ್ನು ತೆಗೆದು ಸುಡಲಾಗಿದೆ.

★

## ಚಪ್ಪರ ಸುಟ್ಟುಹೋಯಿತು

●

ಬೊಂಬಾಯಿ— ಚಂಬೂರು ಗಾಂಧಿ ಮೈದಾನವಲ್ಲಿ ಸುಪ್ರಸಿದ್ಧ ಎಂ ಎಸ್ ಸುಬ್ಬಲಕ್ಷ್ಮಿಯವರ ಸಂಗೀತ ನಡೆಸಲೇರ್ಪಡಿಸಿದ್ದ ಚಪ್ಪರವು ಕಾರ್ಯಕ್ರಮಕ್ಕೆ ಅರ್ಧ ಗಂಟೆ ಮುಂಚೆ ಸುಟ್ಟುಹೋಯಿತು – ಚಪ್ಪರ ಬುರುಬುರುತ್ತಿದ್ದದ್ದನ್ನು ನೋಡಿ ಸುಬ್ಬಲಕ್ಷ್ಮಿಯವರು ನೋಡಿ ತುಂಬಾ ಸಂಕಟಗೊಂಡರು – ಇದನ್ನು ಅರ್ಧ ಗಂಟೆಯಲ್ಲಿ ಆರಿಸಿದ ಫೈರ್ ಬ್ರಿಗೇಡಿನವರು, ಎಲೆಕ್ಟ್ರಿಕ್ ಸರ್ಕ್ಯೂಟ್ ದೋಷವು ಇದಕ್ಕೆ ಕಾರಣವೆಂದರು.

## ಅಕ್ಕಿ ಆಮದು

ನವದೆಹಲಿ— 1968–69 ರಲ್ಲಿ ಕಳೆದ ವರ್ಷಕ್ಕಿಂತ 2 ಮಿಲಿಯ ಟ್ ಅಕ್ಕಿ ಹೆಚ್ಚು ಉತ್ಪಾದನೆಯಾಗುವ ನಿರೀಕ್ಷೆಯಿದ್ದರೂ ಆಹಾರ ಸಚಿವಾಲಯವು ಈ ವರ್ಷ 4 ಲಕ್ಷ ಟ್ ಅಕ್ಕಿ ಆಮದು ಮಾಡಿಕೊಳ್ಳಲು ಯೋಜಿಸಿದೆ.

★

## ಪೌರಸೌಲಭ್ಯಗಳು

ಬೆಂಗಳೂರು— ತ್ಯಾಗರಾಜನಗರದ ನಿವಾಸಿಗಳಿಗೆ ಕ್ಷಿಪ್ರದಲ್ಲಿ ಅವಶ್ಯಕವಾದ ಪೌರಸೌಲಭ್ಯಗಳನ್ನು ಒದಗಿಸುವವಿಷಯಗಳನ್ನು ಪರ್ಯಾಲೋಚಿಸಲಾಗುವದೆಂದು ಪೌರಾಡಳಿತ ಮಂತ್ರಿ ಶ್ರೀ ಬಿ ಎಂ ಪಾಟೀಲರು ತೆರಿಗೆದಾರರ ಸಂಘದ ಉದ್ಘಾಟಿಸುತ್ತಾ ಹೇಳಿದರು.

★

ವಾಷಿಂಗ್ಟನ್— ಖಡ್ಡಾಯ ಮಿಲಿಟರಿ ಸೇವೆಯನ್ನು ರದ್ದುಪಡಿಸುವ ಬಗ್ಗೆ ಕಾರ್ಯಕೈಗೊಳ್ಳಲು ರಕ್ಷಣಾ ಖಾತೆಗೆ ಅಧ್ಯಕ್ಷ ನಿಕ್ಸನ್ನರು ತಿಳಿಸಿರುವರು.

## ಅಣ್ಣಾದೊರೈ ನಿಧನ

●

ಮದ್ರಾಸು— ಇಂದು 12-22 ಕ್ಕೆ ಮದರಾಸು ಮುಖ್ಯಮಂತ್ರಿ ಅಣ್ಣಾದೊರೈ ನಿಧನರಾದರು – ಅವರ ಪಾರ್ಥಿವ ಶರೀರವು ನುಂಗಬಕನ್ನಿನ ಅವರ ಮನೆಗೆ ಆಂಬ್ಯುಲೆನ್ಸಿನಲ್ಲಿ ತರಲಾಯಿತು – ದಾರಿಯುದ್ದಕ್ಕೂ ಶೋಕಭರಿತರಾಗಿ ನಿಂತಿದ್ದ ಜನಸಂದಣಿಯನ್ನು ನೋಡಿಕೊಳ್ಳಲು ಪೋಲೀಸು ಏರ್ಪಾಡಿತ್ತು – ಅರ್ಧ ಗಂಟೆ ನಂತರ ರಾಜಾಜಿ ಹಲ್ನಲ್ಲಿ ಇಡಲಾಗುವದು – ಅವರ ಅವಸಾನ ಕಾಲದಲ್ಲಿ ಪಕ್ಕದಲ್ಲಿ ಪತ್ನಿ ಮತ್ತು ಕುಟುಂಬದವರೂ, ಮಂತ್ರಿಗಳೂ ಇದ್ದರು – ದಕ್ಷಿಣ ಭಾರತದ ಗಾಂಧಿ ಎಂದು ಸಂಬೋಧಿಸಲ್ಪಡುತ್ತಿದ್ದ ಇವರ ನಿಧನವು ತಮಿಳುನಾಡುವಿನಲ್ಲಿ ಮಾತ್ರವಲ್ಲದೆ ಭಾರತಾದ್ಯಂತ ಶೋಕ ಉಂಟುಮಾಡಿದೆ – ಕಾಂಗ್ರೆಸೇತರ ಸರ್ಕಾರಕ್ಕೆ ಧಕ್ಕೆ ತಗುಲಿದಂತಾಗಿದೆ – ರೂಪಾಯಿಗೆ ಒಂದು ಸೇರು ಅಕ್ಕಿ ಜಾರಿಗೆ ತಂದರು : ಪಾನನಿರೋಧ ಕಟ್ಟುನಿಟ್ಟಾಗಿ ನೆರವೇರಿಸಿದರು – ಕೇಂದ್ರಕ್ಕೂ ಇವರ ಆಡಳಿತ ಒಪ್ಪಿತವಾಗಿತ್ತು – ರಾಷ್ಟ್ರಾಧ್ಯಕ್ಷರೂ ಪ್ರಧಾನಿಯವರೂ ವ್ಯಸನ ಸದಚಿಸಿ ಸಂತಾಪಿಸಿರುವರು.

★

ಮೈಸೂರು— ಶ್ರೀ ಅಣ್ಣಾದೊರೈ ನಿಧನ ಬಗ್ಗೆ ಸಂತಾಪಿಸಲು ಟೌನ್ಹಾಲ್ನಲ್ಲಿ ಈ ಸಂಜೆ 6–30 ಕ್ಕೆ ಪೌರರ ಸಬೆಯನ್ನು ಏರ್ಪಡಿಸಲಾಗಿದೆ.

ನವದೆಹಲಿ— 1974 ರ ಹೊತ್ತಿಗೆ 12.8 ಕೋಟಿ ಟ್ ಆಹಾರ ಉತ್ಪಾದನೆ ಗುರಿಯನ್ನು ಪ್ಲಾನಿಂಗು ಕಮಿಷನ್ ನಿಶ್ಚಯಿಸಿದೆ.

○

### ಘಂಟೆ ಹನ್ನೆರಡಕ್ಕೆ ಫಿಂಗಿ ಶಬ್ದ

ಹ್ಯಾಂಬರ್ಗ್ ( ಜಾಡ್ )— 250 ವರ್ಷಗಳ ಹಿಂದಿನ ಈ ಗಡಿಯಾರದ ಫಿಂಗಿಯನ್ನು ಹ್ಯಾಂಬರ್ಗಿನ ಪ್ರದರ್ಶನಾಲಯದಲ್ಲಿ ಕಾಣಬಹುದು. ಈ ಗಡಿಯಾರ ದಲ್ಲಿ 12 ಘಂಟೆಗೆ ಸರಿಯಾಗಿ ಫಿಂಗಿಯು ಹೊಡೆಯುವಂತೆ ಅಳವಡಿಸಲಾಗಿದೆ. ಯು ಪ್ಯಾರಿಸ್ಸಿನ ರಾಜ 15 ನೇ ಲೂಯಿ ರವರ ಆಸ್ಥಾನದಿಂದ ಜರ್ಮನಿಯ ವು ಳ್ ಪ್ರದರ್ಶನಾಲಯಕ್ಕೆ ಬಂದಿತು ; ಅದನ್ನು ಪ್ರಜೆಗಳ ಅವಗಾಹನೆಗಾಗಿ ಹ್ಯಾಂಬ ರ್ಗಿಗೆ ತರಲಾಗಿದೆ. ( ಯೂ ಪಿ ಎಸ್ )

### ಹಿಂದೂ ಧರ್ಮ

ಈಚೆಗೆ ಉಡುಪಿಯಲ್ಲಿ ಹಿಂದೂ ವಿಶ್ವ ಪರಿಷತ್ತಿನ ಜಿಲ್ಲಾ ಶಾಖೆಯು ಸಾರ್ವ ಜನಿಕ ಸಭೆ ಏರ್ಪಡಿಸಿತ್ತು, ಪರ್ಯಾಯ ಶ್ರೀ ಪೇಜಾವರ ಶ್ರೀಗಳವರು ಮಾಡಿದ ಭಾಷಣದಲ್ಲಿ— ಕ್ರಿಸ್ತ ಬುದ್ಧ ಧರ್ಮಗಳಿಗೆ ಈ ದೇಶದಲ್ಲಿ ಮಾತ್ರವಲ್ಲ, ಇತರ ದೇಶ ಗಳಲ್ಲಿಯೂ ಪ್ರಾಶಸ್ತ್ಯವಿದೆ ; ಆದರೆ ಹಿಂದೂಧರ್ಮಕ್ಕೆ ಹಿಂದೂದೇಶದಲ್ಲಿಯೇ ಸರಿ ಯಾದ ಸ್ಥಾನವಿಲ್ಲ. ವಿಶ್ವಕಲ್ಯಾಣಕ್ಕೆ ಹಿಂದೂಧರ್ಮದ ಸಂದೇಶ ಬಹಳ ಮುಖ್ಯ ವಾಗಿದೆ. ಹಿಂದೂದೇಶದಲ್ಲಿ ಹಿಂದೂಧರ್ಮ ನ್ಯಾಯವಾದರೆ ಹಿಂದೂಜನಾಂಗ ಉ ಳಿಯುವಂತಿಲ್ಲ, ಎಂದು ಹೇಳಿದರು. ಶ್ರೀ ಗೋಕರ್ಣ ಮಠಾಧೀಶರು ತಮ್ಮ ಅಧ್ಯಕ್ಷ ಭಾಷಣದಲ್ಲಿ— ಹಿಂದೂಧರ್ಮ ಸನಾತನವಾದದ್ದು ; ಪಾಶ್ಚಾತ್ಯರು ಸಹ, ಹಿಂದೂಧರ್ಮದಲ್ಲಿ ಜೀವ ಕಳ್ಯವೆನ್ನುವ ತತ್ವವಿದ್ದು ತತ್ವಜ್ಞಾನದಲ್ಲಿ ಅದು ಮಹೋ ನ್ನತ ಧರ್ಮ ಎಂದು ಕೊಂಡಾಡಿರುತ್ತಾರೆ. ಪರಧರ್ಮದ ಸಹಿಷ್ಣುತೆ ಹಿಂದೂಧರ್ಮದ ವೈಶಿಷ್ಟ್ಯವಾಗಿದೆ. ನಮ್ಮ ಜನ ತತ್ವನಿಷ್ಠರಾಗಿ ಧರ್ಮದ ಬೆಳಕಿನಲ್ಲಿ ನಡೆದು ಪ್ರತಿ ಯೊಂದು ಮನೆಯೂ ಶಾಂತಿ ಸುಭಿಕ್ಷಗಳಿಂದ ಬೆಳಗುವಂತೆ ಮಾಡಬೇಕು, ಎಂಬುದಾ ಗಿ ಹೇಳಿದರು.


**Cow laughter should be banned Immediately**

**Help The Gorakshana**

**ಆಶೋಕ ಏಜೆನ್ಸೀಸ್**

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ವೈಡೂರ್ಯ

ಎಲ್ಲ ವಿಧ ಆಯುರ್ವೇದ ಔಷಧಗಳಿಗೂ ಮತ್ತಿಲ್ಲಿ ದೊರೆಯುತ್ತವೆ

Quality Printi g — Neat Binding

**Lakshminarasimha Press**

Sivarampet, Mysore

**SHAKTI SUDHA**

A Superb Tonic

**ಪುಡ್‌ಲ್ಯಾಂಡ್ಸ್** ಜಯಪ್ರದ 3ನೇ ವಾರ

.... ಮನಮೋಹಕ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

**ಆ ಮ್ಮ ನಾ ಮ್ಮ**

ತಾರಾಗಣ— ಶಶಿ ಕಪೂರ್, ಶರ್ಮಿಳಾ ಟಾಗೋರ್, ಪ್ರೇಂ ಛೋಪ್ರ ರಾಜೇಂದ್ರನಾಥ್, ಮದನಪುರಿ — ಸಂಗೀತ : ಕಲ್ಯಾಣ್‌ಜೀ ಆನಂದ್‌ಜೀ

[ ದಿನ 3 ಪ್ರದರ್ಶನಗಳು ]

**ಆಪೆರಾ** ಜನಪ್ರಿಯ 2ನೇ ವಾರ

— ಅತ್ಯಮೋಘ ತಮಿಳು ಚಿತ್ರ —

**ಒಳವಿಳಕ್ಕು**

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....


## Golden Jubilee of 'Satyavadi'

The golden jubilee of the 'Satyavadi' is to be celebrated very soon.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy ( Glasgow ) Sri Ananthanarasimha Iyengar (Honganur) have generously extended donations and best wishes.

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and graeing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

**Protect the Cow**

Edited, Printed & Published by Dharmaprachara Niratha M. S. Krishnarao ( Proprietor ) at the Satyavadi Press Chamarajapuram, Mysore 4